ಇಬ್ಬರದೂ ಉತ್ಸಾಹದ ಪಾಲ್ಗೊಳ್ಳುವಿಕೆ. ಪೀಚಲು ದೇಹ, ಗುಳಿಬಿದ್ದ ಕೆನ್ನೆಗಳ ಓಬಳಿ ಪ್ರೀತಿಯಲ್ಲಿ ಬೀಳುತ್ತಾನೆಂಬ ಕಲ್ಪನೆಯೇ ಕೇಶವನಿಗಿರಲಿಲ್ಲ. ಇತರ ಸ್ನೇಹಿತರು ಇದ್ದಕ್ಕಿದ್ದಂತೆ 'ಕ್ಯಾ ಓಬ್ಳಿ ಸಾಬ್, ಖಾನಾ ಕಾವ್ಡೋಂಗೇ' ಇತ್ಯಾದಿ ಅರೆಬರೆ ಹಿಂದಿಯಲ್ಲಿ ಓಬಳಿಯನ್ನು ಕಿಚಾಯಿಸತೊಡಗಿದರು. ಅವನು ಹುಳ್ಳುಳ್ಳಗೆ ಮಕ ಮಾಡಿಕೊಂಡು ರಂಗುತುಂಬಿಕೊಳ್ಳುತ್ತಿದ್ದ. 'ಯಾಕ್ರಲಾ ಅವನ್ನ ಗೋಳು ಹುಯ್ಕಂತಿರಿ' ಅಂತ ಕೇಶವ ಬೈದರೆ, 'ನೀನೊಬ್ಬ ವೇಸ್ಟ್ ಬಾಡಿ' ಎಂದು ಬೆನ್ನಿಗೆ ಗುದ್ದಿ ಇವನನ್ನೂ ಕಿಚಾಯಿಸುತ್ತಿದ್ದರು.

ಆವತ್ತು ಶುಕ್ರವಾರ. ಲಂಚ್ ಅವರ್‌ನಲ್ಲಿ ಭೇಟಿಯಾದ ಓಬಳಿ, 'ಕೇಶ್ವಣ್ಣ ನಾಳೆ ಮಧ್ಯಾಹ್ನ ಸಿದ್ಧರಬೆಟ್ಟಕ್ಕೆ ಹೋಗನ' ಎಂಬ ಪ್ರಸ್ತಾಪ ಮುಂದಿಟ್ಟ. ಹೇಗೂ ಅರ್ಧ ದಿನಕ್ಕೆ ಕ್ಲಾಸ್ ಮುಗಿಯುವುದರಿಂದ ಇವನೂ ಒಪ್ಪಿದ. ಆದರೆ ತಾನು ಸೀದಾ ಊರಿನಿಂದ ಬರುವುದಾಗಿಯೂ, ಅಲ್ಲೇ ಮೀಟಾಗುವುದಾಗಿಯೂ ಹೇಳಿದ್ದು ಕೇಳಿ ಸ್ವಲ್ಪ ಅಚ್ಚರಿಯೆನಿಸಿದರೂ ಕೇಶವ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಏಕೆಂದರೆ ತಿಂಗಳಿಗೊಮ್ಮೆಯಾದರೂ ಈ ರೀತಿ ಮಧುಗಿರಿ, ಚನ್ನರಾಯನದುರ್ಗ, ಮಿಡಿಗೇಶಿ ಬೆಟ್ಟಗಳನ್ನು ಹತ್ತುತ್ತಿದ್ದರು. ಕೆಲವೊಮ್ಮೆ ಸ್ನೇಹಿತರೊಂದಿಗೆ, ಕೆಲವೊಮ್ಮೆ ಇಬ್ಬರೇ.

ಮರುದಿನ ಸಿದ್ಧರಬೆಟ್ಟದಲ್ಲಿ ಎಷ್ಟೋ ಹೊತ್ತು ಕಾದ ನಂತರ 'ಕೇಶ್ವಣ್ಣ' ಎಂಬ ದನಿ. ಅಂತೂ ಬಂದನಲ್ಲಾ ಎಂದು ತಿರುಗಿದರೆ ಓಬಳಿಯ ಜೊತೆ ಒಂದು ಹುಡುಗಿ. 'ಎಲ್ಲಾಳಾಗೋಗಿದ್ದೆ ಇಷ್ಟೊತ್ತು' ಎಂಬ ನುಡಿಮುತ್ತು ನಾಲಿಗೆ ತುದಿವರೆಗೂ ಬಂದು ಅಲ್ಲೇ ಸಿಗಾಕಿಕೊಂಡಿತು. 'ಅಣ, ರಂಗನಾಯಕಮ್ಮ ಅಂತ, ಹಿಂದಿ ಟೀಚರ್ರು, ಹೋದ್ನೆ ವರ್ಷ ಅಪಾಯಿಂಟಾಯ್ತು' ಅಂತಾ ಇವನಿಗೂ 'ಕೇಶ್ವಣ್ಣಂದು ಇಲ್ಲೇ ಹೊಸ್ಕೆರೆ ಪಕ್ಕ ಅಳ್ಳಿ, ಸಕತ್ತಾಗಿ ಓತ್ತರೆ, ನಮಗೆಲ್ಲಾ ಲೀಡ್ರು' ಅಂತಾ ಆಕೆಗೂ ತನ್ನ ವಯೋಸಹಜ ಗಾಬರಿಯಲ್ಲಿ ಪರಿಚಯಿಸಿದ. ಇವನ ಗಾಬರಿಗೆ ನಗು ಬಂದು ಆಕೆ ಬೆಟ್ಟದತ್ತ ನೋಡುವವಳಂತೆ ನಟಿಸಿದಳು. ಕಾಲೇಜಿನಲ್ಲಿ ಹುಡುಗರು ಹಿಂದಿಯಲ್ಲಿ ಕಿಚಾಯಿಸುತ್ತಿದ್ದುದಕ್ಕೆ ಉತ್ತರ ಸಿಕ್ಕಿತ್ತು.

ಬೆಟ್ಟ ಹತ್ತುವಾಗಲೂ ಓಬಳಿ ಲೊಡಲೊಡ ಮಾತಾಡುತ್ತಲೇ ಇದ್ದ. ಆಕೆ ಮಾತ್ರ ಮೌನವನ್ನೇ ಹೊದ್ದುಕೊಂಡಿದ್ದಳು. ಮೆಟ್ಟಿಲು ಅಕ್ಕಪಕ್ಕ ಜಾಲಾರಿ ಮರಗಳು ಹೂಕಾದು ನಿಂತಿದ್ದವು. ಮೂಗಿಗೆ ಕಂಪು ಅಡರುತ್ತಿತ್ತು. ಬೆಟ್ಟದ ಗವಿಯಲ್ಲಿ ದೇವರ ದರ್ಶನ ಮಾಡಿ ಹೊರಬಂದಾಗ ಅಲ್ಲೊಂದು ಅಜ್ಜಿ ಜಾಲಾರಿ ಹೂ ಮಾರುತ್ತಿತ್ತು. 'ಜಾಜಗಿರಿ ಹೂ ಬೇಕು' ಎಂದಳು ರಂಗನಾಯಕಮ್ಮ. ಅವು ಬಾಡಿ ಹೋಗಿರುವುದಾಗಿಯೂ ದೇವಸ್ಥಾನದ ಹಿಂಭಾಗ ತುಂಬಾ ಮರಗಳಿವೆ, ಅಲ್ಲೇ ಕಿತ್ತುಕೊಳ್ಳೋಣ ಅಂದ ಕೇಶವ. ಮೂವರೂ ಅತ್ತ ಹೋದರು.\

ಅಲ್ಲಿ ಜಾಲಾರಿ ತೋಪೇ ಇತ್ತು. ಓಬಳಿ ಅತ್ಯುತ್ಸಾಹದಿಂದ ಒಂದು ಮರ ಹತ್ತಿ ಹೂಕೀಳತೊಡಗಿದ. ಕೇಶವನಿಗೆ ಸಿನಿಮಾಗಳ ನೆನಪಾಗಿ ನಗು ಬಂತು. ಅವನೂ ಹೂಕೀಳಲು ಸಣ್ಣ ಮರ ಹುಡುಕುತ್ತಾ ಸ್ವಲ್ಪ ದೂರ ಹೋದ. ವಾಪಸು ಬಂದಾಗ ಇಬ್ಬರೂ ಬಂಡೆ ಮೇಲೆ ಕುಂತಿದ್ದರು. ಅಲ್ಲಿಂದ ಬೆಟ್ಟದ ಕೆಳಗಿನ ಕಾಡು, ಹಳ್ಳಿಗಳ ಅದ್ಭುತ ದೃಶ್ಯ ಕಾಣುತ್ತಿತ್ತು. ಕೇಶವ ಹೂಗಳನ್ನು ಅವರ ಪಕ್ಕ ಇಟ್ಟು ತುಸುಹೊತ್ತು ನಿಂತವನು ಇಬ್ಬರೂ ಮಾತಾಡಿಕೊಂಡು ಬರಲಿ ಅಂದುಕೊಂಡು ಹಾಗೇ ಅರುಗಾಗಿ ಬಂದುಬಿಟ್ಟ. ಆಗಲೇ ಮಕ್ಕತ್ತಲಾಗುತ್ತಿತ್ತು.

ಎಷ್ಟೋ ಹೊತ್ತಿನ ನಂತರ ಕತ್ತಲನ್ನು ಸೀಳಿಕೊಂಡು ಬಂದರು. ನೋಡಿದರೆ ಬರಿಕೈ. 'ಹೂವಾ ಎಲ್ಲಿ' ಎಂದು ಕೇಶವ ಕೇಳಿದಾಗಲೇ ಅವರಿಗೆ ಗೊತ್ತಾಗಿದ್ದು. 'ಅಯ್ಯಯ್ಯೋ ಅಲ್ಲೇ ಬಿಟ್ ಬಂದ್ವಿ' ಅನ್ನುತ್ತಾ ಓಬಳಿ ತರಲು ಹೊರಟ. 'ಬೇಡ ಬನ್ನಿ ಕತ್ಲಾಯ್ತು' ಎಂದು ರಂಗಮ್ಮ ತಡೆದಳು.

ಬಸ್ಸು ಮಧುಗಿರಿ ಕಡೆ ಹೋಗುತ್ತಿತ್ತು. ಮೂವರೂ ಒಂದೇ ಸೀಟಿನಲ್ಲಿದ್ದರು. ಸಿದ್ಧರಬೆಟ್ಟ ದಾಟಿ ಬಂದರೂ ಕೇಶವನಿಗೆ ಜಾಲಾರಿ ಗಂಧ ಮೂಗಿಗೆ ಹೊಡೆಯುತ್ತಿತ್ತು. ಯಾರೋ ಹೂ ತಂದಿದ್ದಾರೆ ಅಂದುಕೊಂಡ. ಆದರೆ ಬಸ್ಸು ಚಲಿಸಿದಂತೆಲ್ಲಾ ಆ ಜಾಲಾರಿ ಗಂಧವು ಓಬಳಿ ರಂಗನಾಯಕಮ್ಮನ ಮೈಯಿಂದಲೇ ಉಕ್ಕುತ್ತಿದ್ದುದು ಅರಿವಾಯಿತು.

ತಿಂಗಳು ಉರುಳಿದವು. ಅಂತಿಮ ವರ್ಷದ ಪರೀಕ್ಷೆ ಹತ್ತಿರವಾಗುತ್ತಿತ್ತು. ಒಂದು ದಿನ ಕೇಶವ ಕಾಲೇಜು ಗೇಟು ದಾಟುತ್ತಿದ್ದಾಗ 'ಅಪ್ಪೋ' ಎಂಬ ಧ್ವನಿ. ತಿರುಗಿದರೆ ರಂಗಮ್ಮ.

'ನಿಂ ಫ್ರೆಂಡ್ ಬಂದಿಲ್ವ.'

'ಕ್ಲಾಸಲ್ಲಿ ಇರಬೇಕು, ಕರೀತೀನಿರಿ' ಎಂದು ಕಾಲೇಜನ್ನೆಲ್ಲಾ ಒಂದು ಸುತ್ತು ಹಾಕಿ ಬಂದ. ಓಬಳಿ ಬಂದಿರಲಿಲ್ಲ. ಅದನ್ನು ಕೇಳಿ ಅಳುಮುಖ ಮಾಡಿಕೊಂಡಳು. ಇವನಿಗೆ ಭಯವಾಯಿತು. ಅಲ್ಲೇ ಇದ್ದ ಬೆಂಚಿನ ಬಳಿ ಕರೆದೊಯ್ದ. 'ಒಂದ್ ತಿಂಗ್ಳಾಯ್ತು ಕಣಪ್ಪೋ ಸಿಕ್ಕಿ' ಅನ್ನುತ್ತಲೇ ಅಳಲು ಶುರುಮಾಡಿಬಿಟ್ಟಳು. ಕೇಶವನಿಗೆ ಕಕ್ಕಾಬಿಕ್ಕಿ. ಕಾಲೇಜಿಗೆ ಹೋಗುವವರು ಬೇರೆ ನೋಡುತ್ತಿದ್ದರು. 'ಊರಿಗೆ ಹೋಗಿ ನೋಡಿಕೊಂಡು ಬರ್ತೀನಿ' ಎಂದು ಸಮಾಧಾನಿಸಲು ಪ್ರಯತ್ನಿಸಿದರೆ 'ಊರಲ್ಲೂ ಇಲ್ಲ ಕಣಪ್ಪೋ' ಎಂದುಬಿಟ್ಟಳು.

ಆಕೆ ಏನೋ ಹೇಳಲು ಪ್ರಯತ್ನಿಸುತ್ತಿದ್ದಾಳೆ ಅನಿಸುತ್ತಿತ್ತು. ಕೈಬೆರಳು ನುಲಿಯುತ್ತಿದ್ದಳು. 'ಯಾಕೆ ಅಳ್ತೀರಿ, ಎಲ್ಲೋಗಿದ್ರೂ ಎಕ್ಸಾಮ್‌ಗೆ ಬಂದೇ ಬರ್ತಾನೆ' ಎಂದವನ ಮಾತು ಮುಗಿಯುವ ಮುನ್ನವೇ, 'ಅಯ್ಯೋ ನಾನೀಗ ಬಸ್ರಿ ಕಣಪ್ಪೋ' ಎಂದವಳೇ ಎರಡೂ ಕೈಯಲ್ಲಿ ಮುಖ ಮುಚ್ಚಿಕೊಂಡಳು.

ಕೇಶವನಿಗೆ ನಾಲಗೆ ಒಣಗಿತು, ಕಾಲುಗಳಲ್ಲಿ ನಡುಕ. ಆ ಸಮಯಕ್ಕೆ ಸರಿಯಾಗಿ 'ಏಯ್ ಯಾರ್ರೀ ಅಲ್ಲಿ' ಎಂಬ ಗದರಿಕೆ ಧ್ವನಿ. ನೋಡಿದರೆ ಪ್ರಿನ್ಸಿಪಾಲ್ ಕೆಂಪಯ್ಯ ನಿಂತಿದ್ದರು. ಹತ್ತಿರ ಬಂದವರೇ 'ಏನ್ರೀ ಕೇಶವ್ ನೀವೂ ಬುದ್ಧಿ ಹೇಳಿಸ್ಕೊಳೋಂಗಾದ್ರಾ, ಯಾರಮ್ಮಾ ನೀನು, ಹಿಂಗೆಲ್ಲಾ ಬರಬಾರ್ದು ಹೋಗು' ಎಂದಿದ್ದೇ ತಡ ರಂಗಮ್ಮ ಎದ್ದು ಹೋಗಿಬಿಟ್ಟಳು. ಕೇಶವನೂ ಗಾಬರಿಯಾಗಿ ಕ್ಲಾಸಿನತ್ತ ಓಡಿದ.

ಅವತ್ತೇ ಓಬಳಿಯ ಊರಿಗೆ ಹೋದ. ಮನೆ ಬೀಗ ಹಾಕಿತ್ತು. ಪಕ್ಕದ ಮನೆಯವರು 'ಹದಿನೈದು ದಿನದಿಂದ ಎಲ್ಲರೂ ಎಲ್ಲೋ ಹೋಗಿದ್ದಾರೆ' ಎಂದರು. ರಂಗಮ್ಮನ ಊರು, ಶಾಲೆ ಇತ್ಯಾದಿ ಏನೂ ಗೊತ್ತಿರಲಿಲ್ಲ. ಎಲ್ಲೀಂತ ಹುಡುಕುವುದು. ಗೊಂದಲಕ್ಕೆ ಬಿದ್ದ. ಅದೇ ಸಮಯಕ್ಕೆ ಪರೀಕ್ಷೆಗಳು ಆರಂಭವಾದವು.

ಪರೀಕ್ಷೆ ಮುಗಿದ ಕೂಡಲೇ ಬೆಂಗಳೂರು, ಆಮೇಲೆ ಎಂ.ಎ, ಕೆಲಸ, ಮದುವೆ ಅಂತ ಬದುಕಿನ ದಿಕ್ಕೇ ಬದಲಾಯಿತು. ಈ ನಡುವ ಓಬಳಿರಂಗಮ್ಮ ಎಂಬ ಇಮೇಜುಗಳು ಕೇಶವನ ಮನಸ್ಸಿನಿಂದ ಮರೆಯಾಗಿಬಿಟ್ಟವು.

* * *

ರಂಗನಾಯಕಮ್ಮನ ಹುಟ್ಟೂರಿನಲ್ಲಿ ಅವರಿವರನ್ನು ಕೇಳಿ ಮನೆಯನ್ನು ಪತ್ತೆ ಹಚ್ಚಿದ. ಆಕೆ ಮನೆಯಲ್ಲೇ ಇದ್ದರೆ, ಆಕೆಯೇ ಬಾಗಿಲು ತೆಗೆದರೆ ಏನೇನು ಮಾತಾಡಬೇಕೆಂದು ಮನಸಲ್ಲೇ ಲೆಕ್ಕಾಚಾರ ಹಾಕಿಕೊಂಡ. ಮದುವೆ ವಿಷಯ ಕೇಳಿದರೆ ಆಕೆ ಹೇಗೆ ರಿಯಾಕ್ಟ್ ಆಗುತ್ತಾಳೋ, ಎಷ್ಟು ಖುಷಿ ಪಡುತ್ತಾಳೋ ಎಂದು ಊಹಿಸಿ ಉಲ್ಲಸಿತನಾದ. ಒಂದು ವೇಳೆ ಬೇರೆ ಮದುವೆ ಆಗಿಬಿಟ್ಟಿದ್ದರೆ...

ಮನೆ ಮುಂದಿನ ಕೆಂಪುಗಾರೆ ಜಗುಲಿ ಮೇಲೆ ಒಂದು ಅಜ್ಜಿ ಕುಂತಿತ್ತು. ಇವನು ಹೇಳಿದ್ದು ಆಕೆಗೆ ಕೇಳಿಸಲಿಲ್ಲ. ಕಿವಿ ಮಂದ. ಆಕೆ 'ವರೇ ಯಂಕಟೇಸಿ, ಎವರೋ ವಚ್ಚಾರು ಸೂಡ್ರಾ' ಎಂದು ಕೂಗಿತು. ಪಕ್ಕದ ವಪ್ಪಾರದ ಸಂದಿಯಿಂದ ಒಬ್ಬರು ಬಂದು 'ಏನ್ಸಾರ್ ಯಾರ್ ಬೇಕಾಗಿತ್ತು' ಎಂದು ಕೇಳಿದರು. ಕೇಶವ 'ರಂಗನಾಯಕಮ್ಮನ್ನ ನೋಡ್ಬೇಕಿತ್ತು' ಎಂದ ಕೂಡಲೇ ಅವನ ನಡೆನುಡಿಗಳೇ ಬದಲಾಗಿ ಹೋದವು. 'ಅವಳು ಸತ್ತು ಅತ್ರುಬೀಳ ಹದ್ನೈದ್ ವರ್ಷ ಆಯ್ತು' ಎಂದು ಕೂಗಾಕಿ ಅವಳಂಗೆ ಇವಳಿಂಗೆ ಅಂತ ಎಗರಾಡತೊಡಗಿದ. ಜನ ಸೇರಿದರು. ಅಜ್ಜಿಗೆ ಏನೂ ಕೇಳಿಸುತ್ತಿರಲಿಲ್ಲ, ಆದರೆ ಏನೋ ಆಗುತ್ತಿದೆ ಅನ್ನಿಸಿ 'ಎವುಡ್ರಾ, ಏಮೈಯಿಂದಿ' ಎಂದು ಕೇಳತೊಡಗಿತು. ಇಷ್ಟೆಲ್ಲಾ ಗಲಾಟೆ ನಡುವೆ ಯಂಕಟೇಸಿ ರಂಗನಾಯಕಮ್ಮನ ಅಣ್ಣ ಎಂದು ಗೊತ್ತಾಯಿತು. ಮಾತನಾಡಲಿಕ್ಕೇ ಅವಕಾಶವಾಗಲಿಲ್ಲ. ಗುಂಪು ವಿಚಾರಣೆಗೆ ಮೊದಲಿಟ್ಟುಕೊಂಡಿತು.

ನಿಮ್ದು ಯಾವೂರು, ನೀವು ಯಾವ ಪೈಕಿ, ರಂಗಮ್ಮ ಎಂಗ್ ಪರಿಚಯ, ಈಗ್ಯಾಕೆ ಬಂದಿದ್ದೀರಾ ಹೀಗೆ ತಲಾಕೊಂದೊಂದು ಮಾತು. ಇದ್ದಕ್ಕಿದ್ದಂತೆ 'ಇವ್ನೇ ಕಣ್ರಲೇ ನಂ ರಂಗಮ್ಮುಂಗೆ ಮೋಸ ಮಾಡ್ದೋನು' ಅಂತ ಯಾರೋ ಅಂದರು. ದುಡುಮ್ ಎಂದು ಬೆನ್ನಿಗೆ ಏಟು ಬಿತ್ತು. ಅದೇ ಮಕನಾಗಿ ದಡದಡ ಅಂತ ಮತ್ತಷ್ಟು ಏಟುಗಳು. ಅಜ್ಜಿ ಎಲ್ಲರನ್ನೂ ಅದ್ಲಿಸಿ ನೂಕಿತು. ಯಂಕಟೇಸಿ ಸುಮ್ಮನೇ ಕುಂತಿದ್ದ. ಅವನು ಹೊಡೆಯಲು ಕೈಯೆತ್ತಿರಲಿಲ್ಲ. ಅದು ಕೇಶವನ ಗಮನಕ್ಕೂ ಬಂದಿತ್ತು. ಅಂದರೆ ಅಜ್ಜಿ